೬-೩೦ ಪಿ.ಎಂ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಇಲ್ಲಿ ಒಂದು ನಿರ್ಣಯ ಆಗಬೇಕು. ಕಾನೂನು ಪ್ರಕಾರ ಕಸ್ಟಡಿಗೆ ಕಳುಹಿಸಬೇಕಾದರೆ ಆ ಬಗ್ಗೆ ಒಂದು ನಿರ್ಣಯ ಬೇಕಾಗುತ್ತದೆ. ಇವೊತ್ತು ಆ ಒಂದು ನಿರ್ಣಯ ಮಾಡಿಕೊಂಡು ಬೇಕಾದರೆ ಬೆಳಿಗ್ಗೆ ಸದನ ಪ್ರಾರಂಭ ಆಗುವಾಗಲೇ ಪ್ರಾರಂಭ ಮಾಡಿ. ಆಗ ಬೇಕಾದರೆ ನಾವು ಕಂಪಿಡರ್ ಮಾಡುತ್ತೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾವು ನಮ್ಮ ನಿಲುವನ್ನು ಸ್ಪಷ್ಟವಾಗಿ ಹೇಳಿದ್ದೇವೆ. ನಾನು ಹೇಳಿದ ವಾದವನ್ನು ಹೇಳುವುದಕ್ಕೆ ನೀವು ಸಿದ್ಧವಿಲ್ಲ. ಅವರು ತಪ್ಪು ಮಾಡಿಲ್ಲ ಎಂದು ನಾವು ಹೇಳಲಿಲ್ಲ. ಅವರು ಮಾಡಿರತಕ್ಕಂಥಾದ್ದು ಸರಿ ಎಂದು ಯಾರೂ ಹೇಳುತ್ತಿಲ್ಲ. ಶಿಕ್ಷೆ ವಿಧಿಸಬೇಕಾದರೆ ಅದಕ್ಕೂ ಒಂದು ಮಿತಿ ಇದೆ. ಹುಡುಗರು ಕೆಲವು ಸಾರಿ ಆ ರೀತಿ ಮಾಡುತ್ತಾರೆ. ನಾನು ಕಾಲೇಜಿನಲ್ಲಿ ಪಾಠ ಹೇಳತಕ್ಕವನು. ಒಂದೊಂದು ಸಾರಿ ಹುಡುಗರಿಗೆ ಹೊಡೆಯಬೇಕಂ ಎನ್ನುವಷ್ಟು ಕೋಪ ಬರುತ್ತದೆ. ೫ ನಿಮಿಷದಲ್ಲಿ ಮತ್ತೆ ಹುಡುಗರಂ ಸರಿಹೋಗುತ್ತಾರೆ. ಮಾನ್ಯ ಭಾಸ್ಕರಶೆಟ್ಟಿಯವರು ಅದನ್ನು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಭಾಸ ರಶೆಟ್ಟಿ.—ಅವರು ಕೊಟ್ಟಿರತಕ್ಕ ಹೇಳಿಕೆ ಆ ರೀತಿ ಇದೆ.

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಅದನ್ನೇ ಪುನಃ ಹೇಳುವುದರಿಂದ ಪ್ರಯೋಜನ ಇಲ್ಲ.

ಶ್ರೀ ಬಿ. ಭಾಸ್ಕರ್‌ಶೆಟ್ಟಿ.—ನನಗೂ ಅನುಕಂಪ ಇದೆ, ಅವರು ಕೊಟ್ಟಿರತಕ್ಕ ಹೇಳಿಕೆಯಲ್ಲಿ ಆ ರೀತಿ ಹೇಳಿರುವುದರಿಂದ ಈ ನಿರ್ಣಯ ತಂದಿದ್ದೇವೆ.

ಶ್ರೀ ಎ. ಲಕ್ಷ್ಮೀಸಾಗರ್.—ಈ ವಿಚಾರದಲ್ಲಿ ನಮ್ಮ ಸ್ನೇಹಿತರು ಹೇಳಿದ್ದಾರೆ. ಅಲ್ಲದೇ ಇವೊತ್ತು ಸಂಜೆಯವರೆಗೂ ಅವರು ಕಸ್ಟಡಿಯಲ್ಲಿದ್ದಾರೆ. ಅವರಿಗೆ ಅಷ್ಟೇ ಪನಿಷ್‌ಮೆಂಟ್ ಸಾಕು ಅವರಿಗೆ ಜಾಸ್ತಿ ಪನಿಷ್‌ಮೆಂಟ್ ಕೊಡುವುದರಿಂದ ನಿಮ್ಮ ಘನತೆ ಗೌರವಗಳು ಜಾಸ್ತಿಯಾಗುವುದು ಇಲ್ಲ ಕುಂದುವುದು ಇಲ್ಲ. ಆದ್ದರಿಂದ ಇದನ್ನು ಒಂದು ಸಹಜ ದೃಷ್ಟಿಯಿಂದ ನೋಡಬೇಕೆಂದು ಹೇಳುತ್ತೇನೆ: ಇಲ್ಲ, ನಿಮಗೆ ಬಹುಮತ ಇದೆ ನೀವು ಏನು ಬೇಕಾದರೂ ಮಾಡಿಕೊಂಡು ಹೋಗಿ ನಾವು ಅಂತೂ ಹೋಗುತ್ತೇವೆ.

(ಮಾನ್ಯ ಎ. ಲಕ್ಷ್ಮೀಸಾಗರ್ ಅವರು ಸಭೆಯಿಂದ ಹೊರಗೆ ಹೋದರು)

ಶ್ರೀ ಹೆಚ್. ಗಂಗಾಧರನ್.—ಅಧಿಕಾರ ಇರತಕ್ಕವರು ತಪ್ಪು ಮಾಡಿದಂಥ ಸಂದರ್ಭದಲ್ಲಿ ಶಿಕ್ಷೆ ಮಾಡುತ್ತಾರೆ. ಒಂದು ದಿವಸ ಶಿಕ್ಷೆ ಆದರೂ ಅಷ್ಟೇ, ಮೂರು ದಿವಸ ಶಿಕ್ಷೆ ಆದರೂ ಅಷ್ಟೇ, ಇವೊತ್ತು ತಾವು ಅವರಿಗೆ ಎಚ್ಚರಿಕೆ ಕೊಟ್ಟಿದ್ದಾಗಿದೆ ಒಂದು ದಿನ ಅವರು ಶಿಕ್ಷೆ ಅನುಭವಿಸಿದ್ದಾರೆ. ಆದ್ದರಿಂದ ಏತಕ್ಕೆ ಔದಾರ್ಯ ತೋರಿಸಬಾರದು. ಇಷ್ಟು ಔದಾರ್ಯ ತೋರಿಸಲಿಕ್ಕೆ ಆಗುವುದಿಲ್ಲ ಅಂದರೆ ಹೇಗೆ ?

ಶ್ರೀ ಬಿ. ಭಾಸ್ಕರ್‌ಶೆಟ್ಟಿ.—ನಾವು ಔದಾರ್ಯ ತೋರಿಸಿದ್ದೇವೆ. ಅಧ್ಯಕ್ಷರೆ, ಮಾನ್ಯ ಸದಸ್ಯರು ಅವರ ಜೊತೆಯಲ್ಲಿ ನಾಳೆ ಮಾತನಾಡಿಕೊಂಡು ಬರಲಿ, ಅವರು ಕ್ಷಮೆ ಕೇಳಿದರೆ ಈ ಒಂದು ನಿರ್ಣಯವನ್ನು ಪುನರ್ ಪರಿಶೀಲನೆ ಮಾಡಬಹುದೆಂದು ನಮ್ಮ ನಾಯಕರು ಈಗಾಗಲೇ ಹೇಳಿದ್ದಾರೆ.

ಶ್ರೀ ಬಿ. ವಿ. ಕಕ್ಕಿಲಾಯ.—ಅಧ್ಯಕ್ಷರೆ, ಇದನ್ನು ಯಾವ ಆತ್ಮಾಭಿಮಾನ ಇರತಕ್ಕವರು ಯಾರೂ ಒಪ್ಪಿಕೊಳ್ಳುವುದಿಲ್ಲ. ಅವರಿಗೆ ನೀವು ನಾಲ್ಕೈದು ದಿವಸ ಶಿಕ್ಷೆ ಅಂಥ ಮಾಡುವುದರಿಂದ ಏನೂ ಆಗುವುದಿಲ್ಲ. ಪುನಃ ನಾವು ಮನವಿ ಮಾಡಿಕೊಳ್ಳುತ್ತೇವೆ. ದಯಮಾಡಿ ತಾವು ಈ ಪಂತಕ್ಕೆ ಹೋಗಬೇಡಿ. ಏನೋ ಘಟನೆ ನಡೆದುಹೋಗಿದೆ ಇಂತಾದ್ದು ಇದು ಮೊದಲಸಾರಿ ಅಲ್ಲ, ಈ ತರಹ ಹಲವಾರು ಸಾರಿ ಆಗಿದೆ. ಆದ್ದರಿಂದ, ನೀವು ಈ ಮಟ್ಟಿಕ್ಕೆ ಹೋಗುವುದು ಬೇಡ. ಇವೊತ್ತು ಈ ಸದನದ ಕಾರ್ಯಕಲಾಪ ಮುಗಿಯುವ ತನಕ ಅವರಿಗೆ ಶಿಕ್ಷೆ ಕೊಟ್ಟಿದ್ದೇ ಸಾಕು ಎಂದು ತಿಳಿದುಕೊಂಡು ಇದನ್ನು ಇಲ್ಲಿಗೆ ಮುಕ್ತಾಯ ಮಾಡಿ ; ಈ ಸದನ ಕದಲಬೇಕೆಂದು ಕೇಳಿಕೊಳ್ಳುತ್ತೇನೆ. ಇಲ್ಲ ಅಂದರೆ ತಾವು ಪಾಸ್ ಮಾಡಿಕೊಳ್ಳುವುದಾದರೆ ಪಾಸ್ ಮಾಡಿಕೊಳ್ಳಿ, ನಮ್ಮ ಪಾಡಿಗೆ ನಾವು ಹೋಗುತ್ತೇವೆ.

(ಮಾನ್ಯ ಬಿ. ವಿ. ಕಕ್ಕಿಲಾಯ ಅವರು ಸಭೆಯಿಂದ ಹೊರಗೆ ಹೋದರು)